# ಇಲ್ಲೆ ಇರು

ಬೆರಳುಗಳಲಿ ಬಿಸ್ಕತ್ತೋ
ಮುಷ್ಟಿಯಲಿ ಪೆಪ್ಪರಮೆಂಟೋ
ತುಟಿಗೆ ಜೇನೋ ಸವರಿ
ಪೇಟೆಗೆ ಹೊರಟೇ ಬಿಟ್ಟಿದ್ದಾಳೆ ಅಮ್ಮ
'ಬಂದು ಬಿಡುವೆನು ಬೇಗ' ನಗುತಿರು ಕಂದ
ಎಂದು ಕಂದನ ಹೊಸ್ತಿಲ ಕಟಕಟೆಯಾಚೆ
ನಿಲ್ಲಿಸಿ

ಕಾದ ಕಂದನ ಕಣ್ಣುಗಳಲ್ಲಿ ಅಮ್ಮನ ಹೆಜ್ಜೆ ಚಿತ್ರ
ಹರಡಿ ಮನೆತುಂಬ ಕುದುರೆ ಆನೆ ಜೋಡಿ ಗಿಳಿ
ಗಿಲಕಿ ಮೆತ್ತನೆಯ ಚೆಂಡು ಹೂಗೋಲು
ಖಾಲಿ ತೊಟ್ಟಿಲ ಹಗ್ಗ
ಬಾಗಿ ಬೀಳುವ ಬಿದ್ದು ಏಳುವ ಗೊಂಬೆ
ಮರದ ಮಣಿಗಳಿಗೆಲ್ಲ ಅಮ್ಮ ಸವರಿದ ಕನಸು

ನೆನೆದು ಮುಖ ಉಬ್ಬಿಸಿ ತುಟಿ ಮುರುಟಿ
ಹೊರಬರಲಾರದ ಅಳು ಕಣ್ಣು ಬಾವಿ
ಕೂಡುವ ಹುಬ್ಬು ನಿರೀಕ್ಷೆಗೆ ಎಳೆದ ಸೇತುವೆ
ಬಾರಿ ಬಾರಿಗೆ ಮುಗಿಲ ಕಡೆಗೆ ನೋಡುವ
ನವಿಲ ಗೆರೆ
ಅಮ್ಮನ ಸಂತೆಯೋ ಮುಗಿಯಲಾರದು
ನೋಡಿದೆಡೆ ಎಲ್ಲ ಮಗುವಿನದೆ ನಗು
ಕೂಗಿದ ಕರೆದ ತೆರೆದ ತುಟಿಯಲಿ ಮಿನುಗು ದೀಪ
ತೋಳಿಗೆ ಅಂಟಿಕೊಂಡ ಮಗುಘಮಲು
ಮತ್ತೆ ಕಣ್ಣು ಹಾಯುವುದು ಆ ಕಡೆಗೇ
ಹೊಸ ಗಿಲಕಿ ಮೆತ್ತನೆಯ ಚೆಂಡು
ಬಾಯಿಗಿಟ್ಟರೂ ನೋವಾಗದ ನವಿರ ಆಟಿಕೆ
ಕಾದ ಮಗುವಿನ ಕಣ್ಣಂಗಳದಲ್ಲಿ ನಿಂತ ನೀರು

ಪೇಟೆಗೆ ಹೊರಟಿದ್ದಾಳೆ ಅಮ್ಮ
ಎಲ್ಲವ ಹರಡಿಯು ಏನೂ ಇಲ್ಲದಂತೆ ಮಾಡಿ
ಇದ್ದಾರೆ ಎಲ್ಲ ಸುತ್ತಲೂ ಓಡಾಡುವ